**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 1429/2019**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು. ಪಿಡಬ್ಲ್ಯೂ 1**

**ದಿನಾಂಕಃ 16.04.2025**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಕೆ ವೈ ವಕೀಲರಿಂದಃ**

ನಿಪಿ.15 ರಲ್ಲಿ ತೋರಿಸಿದಂತೆ ದಿಃ 06.12.2016 ರಿಂದ ದಿಃ 31.12.2018 ರವರೆಗೆ ದಿನಕ್ಕೆ 100/ ರೂಗಳಂತೆ ಪಿಗ್ಮಿ ಕಟ್ಟಿರುತ್ತಾರೆ ಎಂದರೆ ಸರಿ. ಅಂದರೆ ಒಟ್ಟು 16,250/- ರೂ ಹಣವನ್ನು ಕಟ್ಟಿರುತ್ತಾರೆ ಎಂದರೆ ಸರಿ. ಒಟ್ಟು 47,900/- ರೂ ಅಸಲು ಮತ್ತು 6,350/- ರೂ ಬಡ್ಡಿ ಒಟ್ಟು 54,053/- ಇಷ್ಟು ಹಣ ಬಾಕಿ ಇದೆ ಎಂದು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿ. ಆರೋಪಿ ಪಿಗ್ಮಿ ಮುಖಾಂತರ ನೀಡಿದ 16,250/ ರೂಗಳನ್ನು 54,053/ ರೂಗಳಲ್ಲಿ ಕಡಿತ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ 16,250/ ರೂ ಆರೋಪಿಯ ಪಿಗ್ಮಿ ಖಾತೆಯಲ್ಲಿ ಈಗಲೂ ಸಹ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಿಪಿ.14 ರ ಕೊನೆಯ ಪುಟದಲ್ಲಿ 2,297/ ರೂಗಳು ಅಸಲಿಗೆ ಜಮಾ ಆಗಿದ್ದು 13,953/ ರೂಗಳು ಸಾಲದ ಬಡ್ಡಿಗೆ ಜಮಾ ಆಗಿರುತ್ತದೆ. ಅಲ್ಲಿಗೆ ಒಟ್ಟು ಆರೋಪಿ ಪಿಗ್ಮಿ ಮೂಲಕ ಸಂದಾಯ ಮಾಡಿದ ಹಣ ಅಂದರೆ 16,250/ ರೂಗಳನ್ನು ಕಡಿತ ಮಾಡಿದಂತಾಗಿರುತ್ತದೆ ಎಂದು ನುಡಿಯುತ್ತಾರೆ. 50,000/ ರೂ ಸಾಲಕ್ಕೆ ಒಂದು ವರ್ಷಕ್ಕೆ 10 ಸಾವಿರ ರೂ ಬಡ್ಡಿಯಾಗುತ್ತದೆ. ಈ ಪ್ರಕರಣ ದಾಖಲಿಸುವ ಕಾಲಕ್ಕೆ ನಾವು ಆರೋಪಿಗೆ ಸಾಲ ನೀಡಿ 3 ವರ್ಷ ಆಗಿತ್ತು. ಅಂದರೆ 3 ವರ್ಷಕ್ಕೆ 30 ಸಾವಿರ ರೂ ಬಡ್ಡಿ ಮತ್ತು 50 ಸಾವಿರ ರೂ ಅಸಲು ಹಣ ಒಟ್ಟು 80,000/- ಆಗುತ್ತದೆ ಎಂದರೆ ಸರಿ. ಈ ಪ್ರಕರಣವನ್ನು 54,053/- ರೂಗಳಿಗೆ ಸಲ್ಲಿಸಿದ್ದೇವೆ ಎಂದರೆ ಸರಿ. ಹಾಗಾದರೆ ಉಳಿದ ಬಡ್ಡಿ ಹಣದ ಬಗ್ಗೆ ಏನು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಅವರ ಶೇರು ಹಣ ಖಾತೆಯಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಆರೋಪಿಯ ಶೇರ ಹಣ 5 ಸಾವಿರ ರೂ ಇದೆ. ಸದರಿ ಹಣ ಬ್ಯಾಂಕಿನಲ್ಲಿ ಇದೆ. ಆರೋಪಿಯ 16,000/ ರೂ ಪಿಗ್ಮಿ ಹಣ ಹಾಗೂ 5 ಸಾವಿರ ಶೇರು ಹಣ ಒಟ್ಟು 21,000/- ನಿಮ್ಮ ಬ್ಯಾಂಕಿನಲ್ಲಿ ಇದೆ ಎಂದರೆ ಸಾಕ್ಷಿಯು ಪಿಗ್ಮಿ ಹಣವನ್ನು ಕಡಿತ ಮಾಡಿ ಪ್ರಕರಣ ದಾಖಲಿಸಿರುತ್ತೇವೆ ಎಂದು ನುಡಿಯುತ್ತಾರೆ. ಆರೋಪಿ ಸಂದಾಯ ಮಾಡಿದ 16,250/ ರೂಗಳನ್ನು ಸಾಲಕ್ಕೆ ಕಡಿತ ಮಾಡಿದ ಬಗ್ಗೆ ದಾಖಲೆಗಳನ್ನು ಸಲ್ಲಿಸಿದ್ದೇನೆ. ಸಾಕ್ಷಿಗೆ ದಾಖಲೆಗಳನ್ನು ತೋರಿಸಲಾಗಿ ಅದರಲ್ಲಿ ನಿಪಿ.14 ರಲ್ಲಿ ತೋರಿಸಿದರೆ ಹೌದು ಎಂದು ನುಡಿಯುತ್ತಾರೆ. ನಿಪಿ.14 ರಲ್ಲಿ 16250/ ರೂ ಕಡಿತ ಮಾಡಿದ ಬಗ್ಗೆ ಯಾವುದೇ ನಮೂದು ಇಲ್ಲ ಎಂದರೆ ಸರಿಯಲ್ಲ.

ದಿಃ 03.12.2016 ರಂದು ನಾವು ಆರೋಪಿಗೆ ಸಾಲವನ್ನು ನೀಡಿದ್ದೇವೆ ಎಂದರೆ ಸರಿ. ದಿಃ 18.06.2019 ರಂದು ಆರೋಪಿ ಚೆಕ್ ನ್ನು ನೀಡಿರುತ್ತಾರೆ ಎಂದರೆ ಸರಿ. ಅಂದರೆ ಸಾಲ ನೀಡಿ ಒಟ್ಟು 1 ವರೆ ವರ್ಷ ಆಗಿರುತ್ತದೆ ಎಂದರೆ ಸಾಕ್ಷಿಯು ಸಾಲ ನೀಡಿ 3 ವರ್ಷಗಳ ನಂತರ ನಾವು ಚೆಕ

ಸಲ್ಲಿಸಿದ್ದೇವೆ ಎಂದು ನುಡಿಯುತ್ತಾರೆ. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನೀಡಿದ 16,250/ ರೂ ಮತ್ತು ಶೇರ ಹಣ 5,000/- ಒಟ್ಟು 21,250/ ರೂ ನಮ್ಮ ಬಳಿ ಇದೆ ಎಂದರೆ ಸರಿಯಲ್ಲ. ಸದರಿ ಹಣ ನಮ್ಮ ಬಳಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಹಣವನ್ನು ಕಡಿತ ಮಾಡಿ ಆರೋಪಿ ಕೇವಲ 34,000/ ಹಣ ಕೊಡುವುದು ಬಾಕಿ ಇದೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ಆರೋಪಿ 34,000/- ರೂ ಹಣ ತುಂಬಲು ಬಂದಿದ್ದರೂ ಸಹ ನೀವು ಹೆಚ್ಚಿಗೆ ಹಣ ನೀಡವುದು ಬಾಕಿ ಇದೆ ಎಂದು ಅವರಿಂದ ಹಣ ಕಟ್ಟಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾವು ವಿನಾಃಕಾರಣ ಹೆಚ್ಚಿಗೆ ಹಣ ಪಡೆಯುವ ಉದ್ದೇಶದಿಂದ 54,053/ ರುಾಗಳಿಗೆ ಚೆಕ್ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ .**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ